ನಿಮ್ಮ ಪುಟ

## ಪ್ರತಿಕೃತಿ

ಕೊಠಡಿಯೊಂದರ ಶೋಕೇಸಿನಲ್ಲಿ ಪ್ರಶಸ್ತಿ, ಫಲಕಗಳು ಹಾಗೂ ಗ್ರಂಥ ಸಂಗ್ರಹಗಳನ್ನು ಒಪ್ಪವಾಗಿ ಜೋಡಿಸಿಟ್ಟು ತೆಗೆದ ಛಾಯಾಚಿತ್ರದಂತೆ ಕಂಡುಬರುತ್ತದಲ್ಲವೇ! ಆದರೆ ಈ ದೃಶ್ಯ ಕಲಾವಿದನ ಕುಂಚದಿಂದ ಮೂಡಿರುವ ಒಂದು ವರ್ಣ ಚಿತ್ರ.

ತಮಿಳುನಾಡಿನ ಕಲಾವಿದ ರಾಮು ಅವರ ಕುಂಚದಲ್ಲಿ ಜೀವಂತಿಕೆ ಪಡೆದಿರುವ ಕಲಾಕೃತಿ ಇದು. ಈ ಚಿತ್ರ ಆಳ್ವಾಸ್ ವರ್ಣ ವಿರಾಸತ್ ಅಂಗವಾಗಿ ಏರ್ಪಡಿಸಿದ್ದ ವೈವಿಧ್ಯಮಯ ವರ್ಣಚಿತ್ರ ಪ್ರದರ್ಶನದ ನಡುವೆ ಕಂಗೊಳಿಸುತ್ತಿತ್ತು.

**-ಕೆ. ರಾಮಕೃಷ್ಣ, ತೀರ್ಥಹಳ್ಳಿ**






## ಕಾಲ್ನಡಿಗೆಯಲ್ಲಿ ಜ್ಯೋತಿರ್ಲಿಂಗ ದರ್ಶನ

ಭಾರತದಲ್ಲಿ ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡಲು ಬಹುತೇಕ ಭಕ್ತರು ಬಸ್, ರೈಲು, ವಿಮಾನ ಹೀಗೆ ವಿವಿಧ ವಾಹನಗಳ ಮೂಲಕ ಹೊರಡುತ್ತಾರೆ. ಅಚ್ಚರಿ ಎಂದರೆ ರಾಯಚೂರಿನ ಮಾನ್ವಿ ತಾಲ್ಲೂಕಿನ ಅಮರೇಶ್ವರ ಕ್ಯಾಂಪಿನ ಸರ್ವೇಶ್ವರ ರಾವ್ ಎಂಬುವವರು ಕಾಲ್ನಡಿಗೆ ಮೂಲಕ ಹನ್ನೆರಡು ಜ್ಯೋತಿರ್ಲಿಂಗಗಳ ದರ್ಶನ ಮಾಡಲು ಈಗಾಗಲೇ ಹೊರಟಿದ್ದು, ಮಹಾರಾಷ್ಟ್ರದ ಗ್ರೀಷ್ಣೇಶ್ವರ, ಭೀಮಾಶಂಕರ, ತ್ರಯಂಬಕೇಶ್ವರ ಜ್ಯೋತಿರ್ಲಿಂಗಗಳ ದರ್ಶನ ಪಡೆದಿದ್ದು, ಇನ್ನೂ 9 ಜ್ಯೋತಿರ್ಲಿಂಗಗಳ ದರ್ಶನ ಪಡೆಯಬೇಕಾಗಿದೆ. ಸದ್ಯ ಗುಜರಾತಿನಲ್ಲಿ ನಡಿಗೆ ಮುಂದುವರಿಸಿದ್ದಾರೆ. 58 ವರ್ಷದ ರಾವ್ ಇನ್ನೂ ಸುಮಾರು 10,000 ಕಿ.ಮೀ. ನಡೆಯಬೇಕಾಗಿದೆ. ಈ ವಯಸ್ಸಿನಲ್ಲಿ ಅವರ ಉತ್ಸಾಹ ಮೆಚ್ಚಲೇಬೇಕು.

**-ಈರಣ್ಣ ಬೆಂಗಾಲಿ, ರಾಯಚೂರು**

## ಮಹಾ ಕಲಶ

ಶ್ರವಣ ಬೆಳಗೊಳದಲ್ಲೊಂದು ಮಹಾಕಲಶವಿದೆ. ಕೆಳಗಡೆ ಕಮಲದ ಹೂವು, ಅದರ ಮೇಲೊಂದುಕಲಶವಿದೆ. ಶ್ರವಣ ಬೆಳಗೊಳದ ಗೊಮ್ಮಟಗಿರಿಯ ಸಮೀಪದಲ್ಲಿ ಜನಮಂಗಲ ಮಹಾಕಲಶ ಭವನದಲ್ಲಿ ಈ ಕಲಶವನ್ನು ಕಾಣಬಹುದು.

**- ಮಧುರಾ ಎಸ್. ತಾಂಡೇಲ್, ಗಂಗೊಳ್ಳಿ**

